2016 ಕ.ತೀ.ವ 1425

## ಸನ್ಮಾನ್ಯ ನ್ಯಾಯಮೂರ್ತಿ ಡಾ॥ ವಿನೀತ್ ಕೊಠಾರಿ

## ಶ್ರೀಮತಿ ನಾಗಮ್ಮ -ವಿರುದ್ಧ- ಕರ್ನಾಟಕ ಸರ್ಕಾರ ಮತ್ತು ಇತರರು*

**ಭಾರತ ಸಂವಿಧಾನ ಅನುಚ್ಛೇದ 226 ಹಾಗೂ 227ರಡಿಯಲ್ಲಿ ರಿಟ್ ಅರ್ಜಿ.**

**1964ರ ಕರ್ನಾಟಕ ಪುರಸಭೆಗಳ ಕಾಯಿದೆ ಕಲಂ 306**

**ನಾಲ್ಕನೇ ಎದುರುದಾರರು ಸಲ್ಲಿಸಿದ ಮೇಲ್ಮನವಿಯನ್ನು ಪುರಸ್ಕರಿಸಿ ಹೊರಡಿಸಿದ ಎರಡನೇ ಎದುರುದಾರರಾದ ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿಗಳ ಆದೇಶ ಕ್ರಮವನ್ನು ಪ್ರಶ್ನಿಸಿ ಸದರಿ ರಿಟ್ ಅರ್ಜಿ 1964ರ ಕರ್ನಾಟಕ ಪುರಸಭೆಗಳ ಕಾಯಿದೆ ಕಲಂ 306ರ ನಿಯಮಾವಳಿಗಳನ್ನು ಕೂಲಂಕುಶವಾಗಿ ಪರಿಶೀಲಿಸಿದ ಉಚ್ಚ ನ್ಯಾಯಾಲಯವು ಖಾಸಗಿ ವ್ಯಕ್ತಿಗಳ ನಡುವಿನ ವ್ಯಾಜ್ಯವನ್ನು ಬಗೆಹರಿಸುವ ಅಧಿಕಾರ ವ್ಯಾಪ್ತಿಯು ಜಿಲ್ಲಾಧಿಕಾರಿಯವರಿಗಿರುವುದಿಲ್ಲವೆಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಎದುರುದಾರರಿಗೆ ಹತ್ತು ಸಾವಿರ ರೂ.ಗಳಷ್ಟು ಜುಲ್ಮಾನೆಯನ್ನು ವಿಧಿಸಿ ಸದರಿ ರಿಟ್ ಅರ್ಜಿಯನ್ನು ಪುರಸ್ಕರಿಸಿದೆ.**

ಅಪೀಲುದಾರರ ಪರ: ಶ್ರೀ ಟಿ. ಶೇಷಗಿರಿರಾವ್, ವಕೀಲರು
1 ಮತ್ತು 2ನೇ ಪ್ರತ್ಯರ್ಜಿದಾರರ ಪರ :ಶ್ರೀ ವಿ. ಶ್ರೀನಿಧಿ, ಎಜಿಎ.
3ನೇ ಪ್ರತ್ಯರ್ಜಿದಾರರ ಪರ:ಶ್ರೀ ಎಸ್. ಮಹೇಶ್, ವಕೀಲರು.
4ನೇ ಪ್ರತ್ಯರ್ಜಿದಾರರ ಪರ: ಶ್ರೀ ಸಿದ್ದಮಲ್ಲಪ್ಪ, ವಕೀಲರು.

*ರಿಟ್ ಅರ್ಜಿ ಸಂಖ್ಯೆ: 47983-984/2015 (ಎಲ್‌ಬಿ-ಆರ್‌ಇಎಸ್), ದಿನಾಂಕ: 12ನೇ ಜುಲೈ, 2016.

## ಆಜ್ಞೆ

**ಸನ್ಮಾನ್ಯ ನ್ಯಾಯಮೂರ್ತಿ ಡಾ॥ ವಿನೀತ್ ಕೊಠಾರಿ:**

ಅರ್ಜಿದಾರರಾದ ಶ್ರೀಮತಿ ನಾಗಮ್ಮ ಮತ್ತು ಕರ್ನಾಟಕ ಪುರಸಭಾ ಅಧಿನಿಯಮ, 1964ರ 306ನೇ ಪ್ರಕರಣದ ಉಪಬಂಧಗಳಡಿಯಲ್ಲಿ ನೆಲಮಂಗಲದ ಪುರಸಭಾ ಕಚೇರಿಯ ಮುಖ್ಯ ಅಧಿಕಾರಿಯ ವಿರುದ್ಧ ಪ್ರತ್ಯರ್ಜಿದಾರ ಸಂಖ್ಯೆ 4 ಶ್ರೀ ಪೂಜಪ್ಪನವರು ಕ್ಲೇಮು ಮಾಡಿದ ಅಧಿಭೋಗವನ್ನು ಸಂರಕ್ಷಿಸುವುದು ಮಾತ್ರವಲ್ಲದೆ, ಅನುಬಂಧ 'ಇ' ಮತ್ತು 'ಜಿ' ಮೇರೆಗಿನ 'ಹಕ್ಕು ಪತ್ರ'ಗಳ ಅನುಸರಣೆಯಲ್ಲಿ 1972ನೇ ಇಸವಿಯ ವರ್ಷಗಳಷ್ಟು ಹಳೆಯದಾದ ದಾಖಲೆಯಾಗಿರುವಂಥ ಪ್ರಸ್ತುತ ಅರ್ಜಿದಾರರ ಹೆಸರಿನಲ್ಲಿರುವ 'ಖಾತಾ ನಮೂದ'ನ್ನು ಅಮಾನತು ಮಾಡಲು ಪ್ರತ್ಯರ್ಜಿದಾರ ಸಂ.4 ಶ್ರೀ ಪೂಜಪ್ಪನವರು ಸಲ್ಲಿಸಿದ ಅಪೀಲು ಸಂ.5/2015–16ನ್ನು ಸದರಿ ಜಿಲ್ಲಾಧಿಕಾರಿಗಳು ಪುರಸ್ಕರಿಸಿರುತ್ತಾರೆಂಬ ಅರ್ಥ ಬರುವಂತೆ, ಎದುರಿನ ವಕೀಲರುಗಳು ಪರಿಶೀಲನೆಗೆ ಒಳಪಟ್ಟು, ಸ್ಥಳೀಯ ಭಾಷೆಯಲ್ಲಿರುವ ಸದರಿ ದಸ್ತಾವೇಜುಗಳನ್ನು, ಈ ನ್ಯಾಯಾಲಯಕ್ಕೆ ಇಂಗ್ಲಿಷ್‌ನಲ್ಲಿ ವಿವರಿಸಿ, ಪ್ರತ್ಯರ್ಜಿದಾರ ಸಂಖ್ಯೆ.4 ಶ್ರೀ ಪೂಜಪ್ಪನವರು ಆರಂಭಿಸಿದ ಪ್ರಕರಣ ಸಂಖ್ಯೆ 5/1576ರ ನಡಾವಳಿಯಲ್ಲಿನ 19.10.2015ನೇ ದಿನಾಂಕದ 'ಎಂ' ಅನುಬಂಧ ಮತ್ತು 12.08.2015 ಮತ್ತು 19.10.2015ನೇ ದಿನಾಂಕಗಳ 'ಎನ್' ಅನುಬಂಧದ ಮೂಲಕ ಜಿಲ್ಲಾಧಿಕಾರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು ಇವರು ಹೊರಡಿಸಿದ ಆದೇಶದ ಮೂಲಕ ಬಾಧಿತರಾದ ಅರ್ಜಿದಾರರಾದ ಶ್ರೀಮತಿ ನಾಗಮ್ಮನವರು ಈ ರಿಟ್ ಅರ್ಜಿಯನ್ನು ಸಲ್ಲಿಸಿರುತ್ತಾರೆ.

2. ಅಧಿನಿಯಮದ 306ನೇ ಪ್ರಕರಣದಡಿಯಲ್ಲಿ ಜಿಲ್ಲಾಧಿಕಾರಿಗಳು ಹೊರಡಿಸಿದ ಮಧ್ಯಂತರ ಆದೇಶ ಸದರಿ ಅನುಬಂಧ 'ಎಂ' ಮತ್ತು 'ಎನ್'ಗಳಿಂದ ಬಾಧಿತರಾಗಿರುವ ಅರ್ಜಿದಾರರು 05.11.2015ರಂದು ಈ ನ್ಯಾಯಾಲಯದ ಮುಂದೆ ರಿಟ್ ಅರ್ಜಿಯನ್ನು ಸಲ್ಲಿಸಿದ್ದಾರೆ. ಪ್ರತ್ಯರ್ಜಿದಾರರಿಗೆ ನೋಟೀಸ್‌ಗಳನ್ನು ನೀಡುವಾಗ ಈ ನ್ಯಾಯಾಲಯದ ಸಮನ್ವಯ ಪೀಠವು, ಪ್ರತ್ಯರ್ಜಿದಾರ ಸಂ.2 ಜಿಲ್ಲಾಧಿಕಾರಿಯು ಹೊರಡಿಸಿದ

12.08.2015/19.10.2015ನೇ ದಿನಾಂಕಗಳ ಅನುಬಂಧ–ಎನ್ ಹಾಗೂ 19.10.2015ನೇ ದಿನಾಂಕದ ಅನುಬಂಧ–ಎಂ ನ ಕಾರ್ಯಾಚರಣೆಗೆ ತಡೆಯಾಜ್ಞೆಯನ್ನು ನೀಡಿರುತ್ತದೆ. ಆಕ್ಷೇಪಣೆಯ ವಿವರಪಟ್ಟಿಯನ್ನು ಈ ನ್ಯಾಯಾಲಯದಲ್ಲಿ ಖಾಸಗಿ ಪ್ರತ್ಯರ್ಜಿದಾರ ಸಂಖ್ಯೆ.4ರ ಮೂಲಕ ಸಲ್ಲಿಸಲಾಗಿರುತ್ತದೆ.

3. ಅರ್ಜಿದಾರರ ಪರ ಮಾನ್ಯ ವಕೀಲರಾದ ಶ್ರೀಯುತ್ ಟಿ. ಶೇಷಗಿರಿ ರಾವ್‌ರವರು, ಈ ಮುಂದೆ ನಿರೂಪಿತವಾಗಿರುವ ಅಧಿನಿಯಮದ 306ನೇ ಪ್ರಕರಣವು ಸುಮಾರು 3 ದಶಕಗಳ ಹಿಂದೆ ದಾಖಲಾದ ಅರ್ಜಿದಾರರ ಹೆಸರಿನಲ್ಲಿರುವ 'ಖಾತಾ ನಮೂದು'ಗಳನ್ನು ಪ್ರಶ್ನಿಸಿ, ಖಾಸಗಿ ಪ್ರತ್ಯರ್ಜಿದಾರರು ಸಲ್ಲಿಸಿದ ಯಾವುದೇ ಅಂಥ ಅಪೀಲನ್ನು ಪುರಸ್ಕರಿಸಲು ಜಿಲ್ಲಾಧಿಕಾರಿಗಳಿಗೆ ಯಾವುದೇ ಅಧಿಕಾರ ವ್ಯಾಪ್ತಿಯನ್ನು ಖಾತರಿಪಡಿಸಿರುವುದಿಲ್ಲ ಅಥವಾ ಪ್ರದತ್ತಗೊಳಿಸಿರುವುದಿಲ್ಲವೆಂದು ವಾದಿಸಿರುತ್ತಾರೆ. ಅಲ್ಲದೆ ಮಾನ್ಯ ಜಿಲ್ಲಾಧಿಕಾರಿಗಳು, ತಮ್ಮ ಅಧಿಕಾರ ವ್ಯಾಪ್ತಿಗೆ ಬರದೆ ಸಂಪೂರ್ಣವಾಗಿ ಅಸಕ್ಷಮವಾಗಿರುವಂಥ ಸದರಿ ಅಪೀಲನ್ನು ಪುರಸ್ಕರಿಸಿರುವುದರ ಜೊತೆಗೆ, ಪ್ರತ್ಯರ್ಜಿದಾರ ಸಂಖ್ಯೆ 4ರ ಪರವಾಗಿ ಮಧ್ಯಂತರ ಆದೇಶವನ್ನು ಜಾರಿಮಾಡುವುದರೊಟ್ಟಿಗೆ, ಅಧಿನಿಯಮ 306ನೇ ಪ್ರಕರಣದಡಿಯಲ್ಲಿ ತನ್ನ ಅಧಿಕಾರಗಳನ್ನು ತಾತ್ಪೂರ್ತಿಕ ಅಧಿಕಾರದಲ್ಲಿ ಪ್ರಸ್ತುತ ಅರ್ಜಿದಾರರ ಹೆಸರಿನಲ್ಲಿ 'ಖಾತಾ ನಮೂದ'ನ್ನು ಕಾರ್ಯಾರಂಭವನ್ನು ಅಮಾನತುಗೊಳಿಸಿರುತ್ತಾರೆಂದೂ ಸಹ ವಾದಿಸಿರುತ್ತಾರೆ.

4. ಅಲ್ಲದೆ, ನ್ಯಾಯವಾದಿಗಳು, ಸ್ವಾಮ್ಯದ ಪ್ರಶ್ನೆಯನ್ನು, ಈ ಉಪಬಂಧಗಳಲ್ಲಿ ಜಿಲ್ಲಾಧಿಕಾರಿಗಳು ನಿರ್ಧರಿಸಲಾಗುವುದಿಲ್ಲ ಮತ್ತು ತನ್ನ ಸ್ವಾಮ್ಯವನ್ನು ಸುಸ್ಥಾಪಿಸದೆ, ಪ್ರತ್ಯರ್ಜಿದಾರ ಸಂ.4, ಅರ್ಜಿದಾರರ ಅಣತಿಯಂತೆ 'ಖಾತಾ ನಮೂದುಗಳಲ್ಲಿ' ಕೆಲವು ದುರುಪಯೋಗಗಳ ಆಧಾರದ ಮೇಲೆ ಇದನ್ನು ಪಡೆಯಲಾಗಿದೆಯೆಂಬ ತಾತ್ಪೂರ್ತಿಕ ಆಧಾರದ ಮೇಲೆ ಅರ್ಜಿದಾರರ ಹೆಸರಿನಲ್ಲಿ 'ಖಾತಾ ನಮೂದುಗಳ' ಬದಲಾವಣೆಗೆ ಸಂಬಂಧಿಸಿದಂತೆ ಸದರಿ ಜಿಲ್ಲಾಧಿಕಾರಿಗಳನ್ನು ಸಂಧಿಸಿರುವುದಿಲ್ಲವೆಂದೂ ವಾದಿಸಿರುತ್ತಾರೆ. ಅಲ್ಲದೆ, ಅರ್ಜಿದಾರರ ಪ್ರಶ್ನಿತ ಜಮೀನನ್ನು, 'ಕುಳವಾಡಿ' ಯಾಗಿ (ನೀರಾವರಿ ಉದ್ದೇಶಕ್ಕಾಗಿ ನೀರಿನ ಸರಬರಾಜಿಗೆ ಸಂಬಂಧಿಸಿದ ಪದ) ಅರ್ಜಿದಾರರು

ಸಲ್ಲಿಸಿದ ಸೇವೆಗಳ ಕಾರಣದ ಮೇಲೆ, ಕರ್ನಾಟಕ ಗ್ರಾಮೀಣ ಅಧಿಕಾರಿಗಳ ರದ್ದತಿ ಅಧಿನಿಯಮ, 1961ರ 6ನೇ ಪ್ರಕರಣದ ಉಪಬಂಧಗಳಡಿಯಲ್ಲಿ ಅವರಿಗೆ ಪದತ್ತಗೊಳಿಸಲಾಗಿತ್ತೆಂದೂ ಸಹ ವಾದಿಸಿರುತ್ತಾರೆ.

5. ಮತ್ತೊಂದು ಕಡೆ, ಪ್ರತ್ಯರ್ಜಿದಾರ ಸಂಖ್ಯೆ.4ರವರ ಪರ ಹಾಜರಾದ ಮಾನ್ಯ ವಕೀಲರಾದ ಶ್ರೀಯುತ ಪಿ. ಸಿದ್ಧಮಲ್ಲಪ್ಪನವರು, ದುರುಪಯೋಗದ ಆಧಾರದ ಮೇಲೆ, ವಂಚನೆಯನ್ನು ಎಸಗಿ, ಅರ್ಜಿದಾರನು, ಆಕೆಯ ಹೆಸರಿನಲ್ಲಿ 'ಖಾತಾ ಪ್ರಮಾಣಪತ್ರ'ವನ್ನು ಪಡೆದಿರುವುದು, ಖಾಸಗಿ ವ್ಯಕ್ತಿಯ ಅಂಥ ಅಪೀಲು ಅಥವಾ ಅರ್ಜಿಯನ್ನು ಪುರಸ್ಕರಿಸಿ, ಅಂಥ ಕೈಚಳಕ ಅಥವಾ ಸೃಷ್ಟನೆ ಬಹಿರಂಗವಾದಲ್ಲಿ ವ್ಯಕ್ತಿಯ ಹೆಸರಿನಲ್ಲಿನ ಅಂಥ ಖಾತಾ ನಮೂದನ್ನು ಜಿಲ್ಲಾಧಿಕಾರಿಯು ಅಮಾನತು ಮಾಡಬಹುದು ಅಥವಾ ರದ್ದುಪಡಿಸಬಹುದು ಎಂಬುದನ್ನು ಸ್ಪಷ್ಟಪಡಿಸುತ್ತದೆ ಎಂದು ತಮ್ಮ ವಾದವನ್ನು ಮಂಡಿಸಿರುತ್ತಾರೆ. ಅಲ್ಲದೆ ಪ್ರಶ್ನಿತ ಆದೇಶಗಳು ಕೇವಲ ವಿಚಾರಣಾಧೀನವಾಗಿರುತ್ತವೆ ಅಥವಾ ಜಿಲ್ಲಾಧಿಕಾರಿಗಳು ಹೊರಡಿಸಿದ ಮಧ್ಯಂತರ ಆದೇಶಗಳಾಗಿರುತ್ತವೆ ಮತ್ತು ಅರ್ಜಿದಾರರು, ಆತನ ಸ್ವಾಮ್ಯ ದಸ್ತಾವೇಜುಗಳೊಂದಿಗೆ ಪ್ರತ್ಯರ್ಜಿದಾರ – ಜಿಲ್ಲಾಧಿಕಾರಿಗಳಿಗೆ ಮನವರಿಕೆ ಮಾಡಿಕೊಳ್ಳಲು ಹಕ್ಕುಳ್ಳವರಾಗಿರುತ್ತಾರೆ ಮತ್ತು ಪ್ರತ್ಯರ್ಜಿದಾರ ಸಂ.4 ಸಲ್ಲಿಸಿದ ಅಪೀಲು/ಅರ್ಜಿಯನ್ನು ಜಿಲ್ಲಾಧಿಕಾರಿಯು ಅಂತಿಮವಾಗಿ ನಿರ್ಧರಿಸಬೇಕಾಗಿರುತ್ತದೆ. ಆದ್ದರಿಂದ, ಅವರು ಈ ಹಂತದಲ್ಲಿ ರಿಟ್ ಅರ್ಜಿಯು ಊರ್ಜಿತವಾಗುವುದಿಲ್ಲವೆಂದೂ ಹಾಗೂ ವಜಾಗೊಳ್ಳಲು ತಕ್ಕುದಾಗಿದೆಯೆಂದು ನಿವೇದಿಸಿಕೊಂಡಿರುತ್ತಾರೆ.

6. ಆದಾಗ್ಯೂ, ಮುನ್ಸಿಪಲ್ ಕೌನ್ಸಿಲ್‌ನ ಪರ ಮಾನ್ಯ ನ್ಯಾಯವಾದಿಯು, ಸ್ವಾಮ್ಯದ ಪ್ರಶ್ನೆಗಳನ್ನು ನಿರ್ಧರಿಸಲು ಹಾಗೂ 'ಖಾತಾ ನಮೂದು'ಗಳನ್ನು ಬದಲಾಯಿಸಲು, ಜಿಲ್ಲಾಧಿಕಾರಿಗಳಿಗೆ ಯಾವುದೇ ಅಧಿಕಾರ ವ್ಯಾಪ್ತಿ ಇರುವುದಿಲ್ಲ. ಪ್ರಸ್ತುತ ಪ್ರಕರಣದಲ್ಲಿ ಸಾರ್ವಜನಿಕ ಶಾಂತಿಯ ಉಲ್ಲಂಘನೆ ಆಗಿರುವುದಿಲ್ಲವೆಂದು ವಾದಿಸಿರುತ್ತಾರೆ. ರಾಜ್ಯದ ಪರ ವಾದ ಮಂಡಿಸಿದ ಮಾನ್ಯ ವಕೀಲರ ವಾದವೂ ಕೂಡ ಇದಕ್ಕೆ ಸದೃಶವಾಗಿಯೇ ಇದೆ.

**ಅಧಿನಿಯಮದ ೩೦೬ನೆಯ ಪ್ರಕರಣದ ವ್ಯಾಪ್ತಿ**

7. ಈ ಹಂತದಲ್ಲಿ, ಪಕ್ಷಕಾರರ ಪರ ಮಾನ್ಯ ನ್ಯಾಯವಾದಿಗಳ ಅಹವಾಲನ್ನು ಆಲಿಸಿ ಈ ನ್ಯಾಯಾಲಯವು, ಕರ್ನಾಟಕ ಪುರಸಭೆಗಳ ಅಧಿನಿಯಮ, 1964ರ 306ನೇ ಪ್ರಕರಣದ ಉದ್ದೇಶಿತ ಚಲಾವಣೆಯಲ್ಲಿ 'ಖಾತಾ ನಮೂದು'ಗಳ ಬದಲಾವಣೆಗೆ ಯಾವುದೇ ಅಂಥ ಅಪೀಲು ಅಥವಾ ಅರ್ಜಿಯನ್ನು ಪುರಸ್ಕರಿಸಲು ಮಾನ್ಯ ಜಿಲ್ಲಾಧಿಕಾರಿಗಳಿಗೆ ಯಾವುದೇ ಅಧಿಕಾರ ವ್ಯಾಪ್ತಿ ಇರುವುದಿಲ್ಲವೆಂಬ ಸ್ಪಷ್ಟವಾದ ಹಾಗೂ ನಿಖರವಾದ ಅಭಿಪ್ರಾಯಕ್ಕೆ ಬಂದಿರುತ್ತದೆ.

ಸದರಿ ಉಪಬಂಧಗಳನ್ನು, ಸಿದ್ಧ ಉಲ್ಲೇಖಕ್ಕಾಗಿ ಈ ಮುಂದೆ ಮರು ಹಾಜರುಪಡಿಸಲಾಗಿರುತ್ತದೆ.

> 306. ಪುರಸಭೆಯ ಆದೇಶಗಳು, ಮುಂತಾದವುಗಳ ಜಾರಿಯನ್ನು ಅಮಾನತು ಮಾಡಲು ಜಿಲ್ಲಾಧಿಕಾರಿಯ ಅಧಿಕಾರ.–
>
> *(1) ಜಿಲ್ಲಾಧಿಕಾರಿಯ ಅಭಿಪ್ರಾಯದಲ್ಲಿ, ಪಟ್ಟಣ ಪುರಸಭೆ ಪರಿಷತ್ತಿನ ಯಾವುದೇ ಆದೇಶ ಅಥವಾ ಠರಾವಿನ ಜಾರಿ ಅಥವಾ ಪಟ್ಟಣ ಪುರಸಭಾ ಪರಿಷತ್ತಿನ ಮೂಲಕ ಅಥವಾ ಅದರ ಪರವಾಗಿ ಮಾಡಬೇಕಾದ ಅಥವಾ ಮಾಡುತ್ತಿರುವಂಥ ಯಾವುದೇ ಕಾರ್ಯ ಕಾನೂನುಬಾಹಿರವಾಗಿದ್ದಲ್ಲಿ, ಅಥವಾ ಸಾರ್ವಜನಿಕರಿಗೆ ಕ್ಷತಿ ಅಥವಾ ತೊಂದರೆಗೆ ಕಾರಣವಾಗಿದ್ದಲ್ಲಿ ಅಥವಾ ಕಾರಣವಾಗುವ ಸಂಭಾವ್ಯವಿದ್ದಲ್ಲಿ ಅಥವಾ ಶಾಂತಿಗೆ ಭಂಗ ತರುವಂಥದಾಗಿದ್ದಲ್ಲಿ, ಆತ, ತನ್ನ ಸಹಿಯೊಂದಿಗೆ ಲಿಖಿತದಲ್ಲಿನ ಆದೇಶದ ಮೂಲಕ ಜಾರಿಯನ್ನು ಅಮಾನತು ಮಾಡಬಹುದು ಅಥವಾ ಅದರ ಮೂಲಕ ಮಾಡಿರುವ ಕಾರ್ಯವನ್ನು ನಿಷೇಧಿಸಬಹುದು.*
>
> *(2) ಜಿಲ್ಲಾಧಿಕಾರಿಗಳು, ಈ ಪ್ರಕರಣದಡಿಯಲ್ಲಿ ಯಾವುದೇ ಆದೇಶವನ್ನು ಮಾಡಿದಾಗ, ಆತ ಕೂಡಲೇ ಸರ್ಕಾರಕ್ಕೆ ಮತ್ತು*

*ಪುರಸಭಾ ಆಡಳಿತದ ನಿರ್ದೇಶಕರಿಗೆ ಮತ್ತು ಆದೇಶವನ್ನು ಮಾಡಿರುವುದಕ್ಕೆ ಸಂಬಂಧಿಸಿದ ಕಾರಣಗಳ ವಿವರಣೆಯೊಂದಿಗೆ, ಆದೇಶದ ಪ್ರತಿಯ ಮೂಲಕ ಬಾಧಿತರಾದ ಮುನ್ಸಿಪಲ್ ಕೌನ್ಸಿಲ್‌ಗೆ ಆದೇಶದ ಪ್ರತಿಯನ್ನು ರವಾನಿಸತಕ್ಕದ್ದು; ಮತ್ತು ಆದೇಶವನ್ನು ಹಿಂದಕ್ಕೆ ಪಡೆಯುವುದು ಅಥವಾ ಅದನ್ನು ಖಾಯಂ ಆಗಿ ಅಥವಾ ಅದು ಭಾವಿಸಬಹುದಾದಂಥ ಅವಧಿಗೆ ಮಾರ್ಪಾಟುಗಳೊಂದಿಗೆ ಅಥವಾ ಮಾರ್ಪಾಟುಗಳಿಲ್ಲದೆ ಜಾರಿಯಲ್ಲಿರುವಂತೆ ಮುಂದುವರೆಸತಕ್ಕದೆಂದು ನಿರ್ದೇಶಿಸುವುದು ಸರ್ಕಾರದ ವಿವೇಚನೆಗೆ ಬಿಟ್ಟದ್ದಾಗಿರುತ್ತದೆ.*

*ಪರಂತು, ಈ ಪ್ರಕರಣದಡಿಯಲ್ಲಿ ಹೊರಡಿಸಿದ ಜಿಲ್ಲಾಧಿಕಾರಿಗಳ ಯಾವುದೇ ಆದೇಶವನ್ನು, ಸದರಿ ಆದೇಶದ ವಿರುದ್ಧ ಕಾರಣ ತೋರಿಸಲು ಯುಕ್ತ ಅವಕಾಶವನ್ನು ಮುನ್ಸಿಪಲ್ ಕೌನ್ಸಿಲ್‌ಗೆ ನೀಡದ ಹೊರತು ಸರ್ಕಾರವು ದೃಢೀಕರಿಸತಕ್ಕದ್ದಲ್ಲ, ಪರಿಷ್ಕರಿಸತಕ್ಕದ್ದಲ್ಲ ಅಥವಾ ಮಾರ್ಪಾಡುಗೊಳಿಸತಕ್ಕದ್ದಲ್ಲ.*

*(1. 20.08.2003ರಿಂದ ಜಾರಿಗೆ ಬರುವಂತೆ 2003ರ 31ನೇ ಅಧಿನಿಯಮದ ಮೂಲಕ ಪ್ರತಿಯೋಜಿಸಲಾಗಿರುತ್ತದೆ).*

8. ಅಧಿನಿಯಮದ 306ನೇ ಪ್ರಕರಣದ ಸದರಿ ಉಪಬಂಧಗಳ ಸಾಧಾರಣ ಪರಿಶೀಲನೆಯು, ಖಾಸಗಿ ಪಕ್ಷಕಾರರಿಂದ ಬಂದ ಅಂಥ ಅಪೀಲು ಅಥವಾ ಅರ್ಜಿಯನ್ನು, ಜಿಲ್ಲಾಧಿಕಾರಿಗಳು ಪರಿಗಣಿಸಬೇಕಾದ ಅಂಶಗಳನ್ನು ಈ ಉಪಬಂಧಗಳ ಮೂಲಕ ಗಮನಿಸಬೇಕಾಗಿರುತ್ತದೆಂಬುದನ್ನು ಸ್ಪಷ್ಟಪಡಿಸುತ್ತದೆ. ಪಟ್ಟಣ ಮುನ್ಸಿಪಲ್ ಕೌನ್ಸಿಲ್‌ನ ಯಾವುದೇ ಆದೇಶ ಅಥವಾ ಠರಾವಿನ ಜಾರಿಯು ಕಾನೂನು ಬಾಹಿರವಾಗಿರುತ್ತದೆ ಅಥವಾ ಸಾರ್ವಜನಿಕ ಕ್ಷತಿಗೆ ಅಥವಾ ಸಾರ್ವಜನಿಕ ತೊಂದರೆಗೆ ಕಾರಣವಾಗುತ್ತದೆ ಅಥವಾ ತೊಂದರೆಯಾಗುವ ಸಂಭಾವ್ಯವಿರುತ್ತದೆಂದು ಹಾಗೂ ಮುನ್ಸಿಪಲ್ ಕೌನ್ಸಿಲ್‌ನ ಆದೇಶ ಅಥವಾ ಠರಾವಿನ ಅಂಥ ಜಾರಿಯು, ಸಾರ್ವಜನಿಕ ಶಾಂತಿಯ ಉಲ್ಲಂಘನೆಗೆ

ಕಾರಣವಾಗುತ್ತದೆಂದು ಜಿಲ್ಲಾಧಿಕಾರಿಯು ಅಭಿಪ್ರಾಯಪಟ್ಟಲ್ಲಿ ಅವರು ಅಧಿಕಾರಗಳ ಚಲಾವಣೆಯನ್ನು ಖುದ್ದಾಗಿ ಚಲಾಯಿಸಲು ಉಪಬಂಧವು ಅವಕಾಶ ಕಲ್ಪಿಸುತ್ತದೆ. ಆತನಿಗೆ ಲಭ್ಯವಾದ ಸಂದರ್ಭ, ಆಧಾರ ಮತ್ತು ವಸ್ತು ವಿಷಯಗಳ ಮೇಲೆ, ಅಧಿನಿಯಮದ (2)ನೇ ಉಪ-ಪ್ರಕರಣದಡಿಯಲ್ಲಿ ರಾಜ್ಯ ಸರ್ಕಾರದ ಅನುಮೋದನೆಗೆ ಒಳಪಟ್ಟು, ಮುನ್ಸಿಪಲ್ ಕೌನ್ಸಿಲ್‌ನ ಆದೇಶ ಅಥವಾ ಠರಾವಿನ ಜಾರಿಯನ್ನು ಅಮಾನತು ಮಾಡುವುದಕ್ಕೆ ಸಂಬಂಧಿಸಿದಂತೆ ಲಿಖಿತದಲ್ಲಿ ಆದೇಶವನ್ನು ಹೊರಡಿಸಬೇಕಾಗಿರುತ್ತದೆ ಮತ್ತು ಸಂಬಂಧಪಟ್ಟ ಮುನ್ಸಿಪಲ್ ಕೌನ್ಸಿಲ್‌ಗೆ ಕಾರಣವನ್ನು ತೋರಿಸುವ ಯುಕ್ತ ಅವಕಾಶವನ್ನು ಒದಗಿಸದೆ ಜಿಲ್ಲಾಧಿಕಾರಿಯು ಯಾವುದೇ ಅಂಥ ಆದೇಶವನ್ನು ಹೊರಡಿಸುವಂತಿಲ್ಲ.

9. ಅಧಿನಿಯಮದ 306ನೇ ಪ್ರಕರಣದ ಉಪಬಂಧಗಳು, ಅವುಗಳ ವ್ಯಾಪ್ತಿಯೊಳಗೆ, ಅದರಲ್ಲೂ ವಿಶೇಷವಾಗಿ ಖಾಸಗಿ ಪಕ್ಷಕಾರರ ನಡುವಿನ ವಿವಾದಗಳನ್ನು ಒಳಗೊಳ್ಳುವುದಿಲ್ಲ. ಜಿಲ್ಲಾಧಿಕಾರಿಯು ಖಾಸಗಿ ಪ್ರತ್ಯರ್ಜಿದಾರ ಸಂಖ್ಯೆ 4 ಶ್ರೀ ಪೂಜಪ್ಪನವರು ಸಲ್ಲಿಸಿದ ಪ್ರಸ್ತುತ ಪ್ರಕರಣದಲ್ಲಿ ಅವರ ಮುಂದೆ ಸಲ್ಲಿಸಿದಂಥ ಯಾವುದೇ ಅರ್ಜಿ ಅಥವಾ ಅಪೀಲಿನ ಸಂಬಂಧದಲ್ಲಿ ಸಿವಿಲ್ ನ್ಯಾಯಾಲಯದಂತೆ ಕ್ರಮ ಕೈಗೊಳ್ಳುವಂತಿಲ್ಲ ಇಲ್ಲವೆ ಪುರಸ್ಕರಿಸುವಂತಿಲ್ಲ. ಪ್ರತ್ಯರ್ಜಿದಾರ ಸಂ.4ರ ರಿಂದ ಪ್ರಸ್ತಾಪಿಸಲಾದ ವಾದಗಳ ಗುಣಾರ್ಹತೆಯೊಂದಿಗೆ ಸಾಗಿದ ಪ್ರಶ್ನೆಯು ಸುಖಾಸುಮ್ಮನೆ ಉದ್ಭವವಾಗುವುದಿಲ್ಲ. ಏಕೆಂದರೆ, ಖಾಸಗಿ ಪ್ರತ್ಯರ್ಜಿದಾರ ಸಂ.4ರ ಅಪೀಲು ಅಥವಾ ಅರ್ಜಿಯು ಸಂಪೂರ್ಣವಾಗಿ ಅಸಕ್ಷಮವಾಗಿರುತ್ತದೆ ಮತ್ತು ಅಧಿನಿಯಮದ 306ನೇ ಪ್ರಕರಣದ ನಾಲ್ಕೂ ಆಯಾಮಗಳೊಳಗೆ ಊರ್ಜಿತವಾಗುವುದಿಲ್ಲ. ಪ್ರತ್ಯರ್ಜಿದಾರ-4ರವರು ಜಿಲ್ಲಾಧಿಕಾರಿಯ ಮುಂದೆ ಅಂಥ ಯಾವುದೇ ಅಪೀಲು ಅಥವಾ ಅರ್ಜಿಯನ್ನು ಸಲ್ಲಿಸಿ ಅಹವಾಲನ್ನು ಹೇಳಿಕೊಳ್ಳುವ ಹಕ್ಕನ್ನು ಹೊಂದಿಲ್ಲದಿದ್ದಲ್ಲಿ, ಈ ಉಪಬಂಧಗಳಡಿಯಲ್ಲಿ ಆತನ ಅಧಿಕಾರ ವ್ಯಾಪ್ತಿಯನ್ನು ಆಧರಿಸುವ ಪ್ರಶ್ನೆಯು ಉದ್ಭವವಾಗುವುದಿಲ್ಲ. ಆದ್ದರಿಂದ, ಪ್ರತ್ಯರ್ಜಿದಾರ ಸಂ.4ರ ಸದರಿ ಅಪೀಲನ್ನು ಪುರಸ್ಕರಿಸುವುದು ಮತ್ತು ಅದರ ಮೇಲೆ 'ಎಂ' ಮತ್ತು 'ಎನ್' ಎಂಬ ಪ್ರಶ್ನಿತ ಆದೇಶಗಳನ್ನು ಹೊರಡಿಸಿರುವುದು,

ಪ್ರತ್ಯರ್ಜಿದಾರ ಸಂ.2 ಜಿಲ್ಲಾಧಿಕಾರಿಯವರ ಅಧಿಕಾರ ವ್ಯಾಪ್ತಿಯಿಂದ ಸಂಪೂರ್ಣವಾಗಿ ದೂರವಿರುತ್ತದೆ.

10. ಅಧಿನಿಯಮದ 306ನೇ ಪ್ರಕರಣದ ಉಪಬಂಧಗಳ ಮೂಲ ತತ್ವಗಳ ಪ್ರಕಾರ, ಸಾರ್ವಜನಿಕ ಶಾಂತಿಯ ವಾಸ್ತವಿಕ ಅಥವಾ ಒತ್ತಾಯಪೂರ್ವಕ ಉಲ್ಲಂಘನೆಯಾಗಿರುತ್ತದೆಂಬುದರ ಬಗ್ಗೆ ಮುನ್ಸಿಪಲ್ ಕೌನ್ಸಿಲ್‌ನ ಆದೇಶ ಅಥವಾ ಠರಾವು ಇಲ್ಲದಿರುವಲ್ಲಿ, ಜಿಲ್ಲಾಧಿಕಾರಿಗಳು ಅಧಿಕಾರವನ್ನು ಸಂಪೂರ್ಣವಾಗಿ ದುರುಪಯೋಗಪಡಿಸಿಕೊಂಡು, ಖಾಸಗಿ ವ್ಯಕ್ತಿಯ ಅಂಥ ಅರ್ಜಿ ಅಥವಾ ಅಪೀಲನ್ನು ಪುರಸ್ಕರಿಸುವಂತಿಲ್ಲ. ಜಿಲ್ಲಾಧಿಕಾರಿಯು ತಮ್ಮ ಅಧಿಕಾರವನ್ನು ಚಲಾಯಿಸಿರುವಂಥ ಈ ಅಧಿನಿಯಮದ ಸೂಕ್ತ ಉಪಬಂಧಗಳಿಗೆ ಹೆಚ್ಚಿನ ಗಮನವನ್ನು ನೀಡಿಲ್ಲವೆಂಬುದು ಸ್ಪಷ್ಟವಾಗಿ ತಿಳಿದುಬರುತ್ತದೆ.

11. ಯುಕ್ತವಾಗಿ ಚುನಾಯಿತವಾದ ಸಾರ್ವಜನಿಕ ನಿಕಾಯದ ಆದೇಶ ಅಥವಾ ಠರಾವನ್ನು ಅಮಾನತು ಮಾಡಲು ಮುನ್ಸಿಪಲ್ ಕೌನ್ಸಿಲ್‌ನಂಥ ಚುನಾಯಿತ ಸಾರ್ವಜನಿಕ ನಿಕಾಯದ ಮೇಲೆ ಜಿಲ್ಲಾಧಿಕಾರಿಗಳಿಗೆ ಅಸಾಧಾರಣ ಮತ್ತು ಹೆಚ್ಚಿನ ಅಧಿಕಾರಗಳನ್ನು ಸದರಿ ಉಪಬಂಧಗಳು ನೀಡಿದ್ದರೂ ಕೂಡ ಮುನ್ಸಿಪಲ್ ಕೌನ್ಸಿಲ್‌ನ ದಾಖಲೆಗಳಲ್ಲಿ 'ಖಾತಾ ನಮೂದುಗಳ' ಮೇಲೆ ಪ್ರಸ್ತುತ ಪ್ರಕರಣದಲ್ಲಿ ಪಕ್ಷಕಾರರ ನಡುವೆ ಅಂದರೆ ಅರ್ಜಿದಾರರು ಮತ್ತು ಪ್ರತ್ಯರ್ಜಿದಾರ ಸಂಖ್ಯೆ 4ರ ನಡುವಿನ ಖಾಸಗಿ ವಿವಾದಗಳ ಒಳಗೆ ಪ್ರವೇಶಿಸಲು ಜಿಲ್ಲಾಧಿಕಾರಿಗಳು ಹಕ್ಕುಳ್ಳವರಾಗಿರುವುದಿಲ್ಲ. ಪ್ರತ್ಯರ್ಜಿದಾರ ಸಂಖ್ಯೆ 4ರವರು ಪ್ರಸ್ತುತ ಪ್ರಕರಣದಲ್ಲಿ ಕೋರಿರುವಂಥ 'ಖಾತಾ ನಮೂದು'ಗಳ ಬದಲಾವಣೆಯು ಸಿವಿಲ್ ದಾವೆಯನ್ನು ಸರಿಯಾಗಿ ಆರಂಭಿಸುವ ಮೂಲಕ ಮಾತ್ರವೇ ಬಗೆಹರಿಸಿಕೊಳ್ಳಬಹುದಾದಂಥ ಖಾಸಗಿ ವಿವಾದವಾಗಿರುತ್ತದೆ ಹಾಗೂ ಸಾರ್ವಜನಿಕ ಶಾಂತಿಯ ಉಲ್ಲಂಘನೆಯ ಯಾವುದೇ ಪ್ರಶ್ನೆಯು, ಪ್ರಸ್ತುತ ಪ್ರಕರಣದಲ್ಲಿನ ಊಹೆಯ ಪರಿಧಿಯಲ್ಲಿ ಉದ್ಭವಿಸುವುದಿಲ್ಲ.

12. ಆದ್ದರಿಂದ, ಸದರಿ ಜಿಲ್ಲಾಧಿಕಾರಿಯವರು ಖಂಡಿತವಾಗಿಯೂ ಪ್ರತ್ಯರ್ಜಿದಾರ ಸಂಖ್ಯೆ 4 ರವರ ಕ್ಷುಲ್ಲಕ ಅರ್ಜಿ ಅಥವಾ ಅಪೀಲನ್ನು ಪುರಸ್ಕರಿಸಿ, ಪ್ರಸ್ತುತ ಪ್ರಕರಣದಲ್ಲಿ, ಸಂಬಂಧವಿಲ್ಲದ ಕಾರಣಗಳಿಗೆ ಪ್ರಶ್ನಿತ ಆದೇಶವನ್ನು ಹೊರಡಿಸಿರುತ್ತಾರೆ.

13. ಕಾನೂನಿನ ಉಪಬಂಧಗಳು, ಲೋಕ ನೌಕರನ ಎದುರು ಇರುವ ಸೂಕ್ತವಾದ ವಸ್ತು ವಿಷಯ ಅಥವಾ ಲಭ್ಯಸಾಕ್ಷ್ಯದ ಆಧಾರದ ಮೇಲೆ ಸೂಕ್ಷ್ಮ ವಿವೇಚನೆಯೊಂದಿಗೆ ನಿಖರವಾಗಿ ಸುಸ್ಥಾಪಿಸಲ್ಪಟ್ಟ ಆಧಾರಗಳ ಮೇಲೆ ಚಲಾಯಿಸಬೇಕಾದ ಚುನಾಯಿತ ನಿಕಾಯಗಳ ಠರಾವುಗಳು ಅಥವಾ ಆದೇಶಗಳ ಮೇಲೆ ಸದರಿ ಪ್ರಾಧಿಕಾರಿಗೆ ವ್ಯಾಪಕವಾದ ಮತ್ತು ಹೆಚ್ಚಿನ ಅಧಿಕಾರಗಳನ್ನು ನೀಡಿರುತ್ತವೆ. ಪ್ರಸ್ತುತ ಪ್ರಕರಣದಲ್ಲಿ ಬಾಧಿತ ವ್ಯಕ್ತಿ ಅಂದರೆ ಪ್ರಸ್ತುತ ಅರ್ಜಿದಾರರಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ಸಹ ಕೊಡದೆ ಹಲವಾರು ವರ್ಷಗಳ ತರುವಾಯ ಅರ್ಜಿದಾರರ ಹೆಸರಿನಲ್ಲಿ 'ಖಾತಾ ನಮೂದ'ನ್ನು ರದ್ದುಗೊಳಿಸಲು ಕೋರಿ ಖಾಸಗಿ ಪಕ್ಷಕಾರರು ಜಿಲ್ಲಾಧಿಕಾರಿಗಳ ಎದುರು ಅಹವಾಲನ್ನು ಸಲ್ಲಿಸಿದ್ದು ಜಿಲ್ಲಾಧಿಕಾರಿಗಳು, ಇಲ್ಲಿನ ಅರ್ಜಿದಾರರಿಗೆ ಪ್ರತಿಕೂಲವಾಗಿ ಬಾಧಕವಾಗುವಂತೆ ಪ್ರಶ್ನಿತ ಮಧ್ಯಂತರ ಆದೇಶಗಳನ್ನು ಹೊರಡಿಸುವಷ್ಟು ಮುಂದುವರೆದಿರುವುದು ಪರಿಸ್ಥಿತಿಯನ್ನು ಸಂಪೂರ್ಣವಾಗಿ ವ್ಯತಿರಿಕ್ತಗೊಳಿಸಿರುತ್ತದೆ. ಆದ್ದರಿಂದ ಈ ನ್ಯಾಯಾಲಯವು ಮಾನ್ಯ ಜಿಲ್ಲಾಧಿಕಾರಿಯವರು ಅಧಿನಿಯಮದ 306ನೇ ಪ್ರಕರಣದಡಿಯಲ್ಲಿನ ಅವರ ಅಧಿಕಾರಗಳನ್ನು ಸಂಪೂರ್ಣವಾಗಿ ದುರುಪಯೋಗ ಪಡಿಸಿಕೊಂಡು, ಸಂಪೂರ್ಣವಾಗಿ ಅಸಕ್ಷಮವಾಗಿರುವಂಥ ಅಲ್ಲದೆ ಇವರ ಮುಂದೆ ಊರ್ಜಿತವಾಗದಂಥ ಅಪೀಲು/ಅರ್ಜಿಯ ಮೇಲೆ ಪ್ರಶ್ನಿತ ಆದೇಶಗಳನ್ನು ಹೊರಡಿಸಿರುತ್ತಾರೆಂದು ಸ್ಪಷ್ಟವಾಗಿ ಅಭಿಪ್ರಾಯಪಟ್ಟಿರುತ್ತದೆ.

14. ಆದ್ದರಿಂದ, ರಿಟ್ ಅರ್ಜಿಯನ್ನು ವೆಚ್ಚಗಳೊಂದಿಗೆ ಅಂಗೀಕರಿಸಿದೆ. ಸದರಿ ರಿಟ್ ಅರ್ಜಿಯನ್ನು, ಅರ್ಜಿದಾರರಿಗೆ ಮೂರು ತಿಂಗಳೊಳಗೆ ಪ್ರಶ್ನಿತ ಆದೇಶವನ್ನು ಹೊರಡಿಸಿದಂಥ ಜಿಲ್ಲಾಧಿಕಾರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು ಮತ್ತು ಪ್ರತ್ಯರ್ಜಿದಾರ ಸಂಖ್ಯೆ.4 ಪೂಜಪ್ಪ ಇವರುಗಳು ತಲಾ 10,000/– ರೂಪಾಯಿಗಳನ್ನು (ಹತ್ತು ಸಾವಿರ ರೂಪಾಯಿಗಳು ಮಾತ್ರ) ಸಂದಾಯ ಮಾಡುವುದರೊಂದಿಗೆ ಅಂಗೀಕರಿಸಲಾಗಿರುತ್ತದೆ. ಕೂಡಲೇ ಪ್ರತಿಯನ್ನು ಪ್ರತ್ಯರ್ಜಿದಾರರಿಗೆ ಕಳುಹಿಸಬೇಕಾಗಿರುತ್ತದೆ.